ಭಾಗವತವು ಭಗವದ್ದ್ವೇಷ, ಭಗವದ್ಭಯಗಳನ್ನೂ ಭಕ್ತಿಯ ವ್ಯಾಪ್ತಿಯಲ್ಲಿ ಸೇರಿಸಿದೆ; ಏಕೆಂದರೆ ತೀವ್ರದ್ವೇಷ, ಅತೀವ ಭಯಗಳಿಂದ ಸದಾ ಭಗವಂತನ ಚಿಂತನೆ ನಡೆದಿರುವುದರಿಂದ, ಮನಸ್ಸು ಶುದ್ಧವಾಗಿ, ದ್ವೇಷಭಯಗಳಿಂದ ಬಿಡುಗಡೆ ಪಡೆಯಬಹುದು.

ಪ್ರೇಮಕ್ಕೆ ಪಾತ್ರರಾದವರ ಸೇವೆಯಲ್ಲಿ ಪ್ರೇಮವು ಸಹಜವಾಗಿ ಅರಳುವುದರಿಂದ, ಭಾಗವತವು ಇಷ್ಟದೇವತೆಯನ್ನು, ಸಾಧುಸಂತರನ್ನು, ಜಗತ್ತಿನ ಇಡೀ ಜೀವಕುಲವನ್ನು ಭಗವಂತನ ರೂಪಗಳೆಂದು ಭಾವಿಸಿ ಸೇವೆ ಮಾಡುವುದು ಮಹತ್ತರ ಕಾರ್ಯವೆಂದು ಹೇಳಿದೆ. ದೀನರ, ದುರ್ಬಲರ, ಆಪತ್ತಿನಲ್ಲಿರುವವರ ಸೇವೆಗೆ ಮಹತ್ತ್ವವನ್ನು ನೀಡಲಾಗಿದೆ.

ಭಕ್ತಿಯು ಚತುರ್ವಿಧ ಪುರುಷಾರ್ಥಗಳಾದ ಮೇಲೆ ಬರುವ 'ಪಂಚಮ ಪುರುಷಾರ್ಥ' ಎಂದು ಭಾಗವತವು ಹೇಳುತ್ತದೆ. ಮೋಕ್ಷದಿಂದಲೂ ಆಚೆ ಇರುವ ಪುರುಷಾರ್ಥ ಎಂದು ಅದು ಭಕ್ತಿಯನ್ನು ಬಣ್ಣಿಸುತ್ತದೆ. ಭಕ್ತಿಯು, ಅದ್ವೈತವಾದಿಗಳು ಹೇಳುವಂತೆ, ಕೇವಲ ಶುದ್ಧೀಕರಣ ಸಾಧನ. ಆದರೆ ಭಕ್ತಿಯು ಅದರ ಅತ್ಯುನ್ನತ ಸ್ಥಿತಿಯಲ್ಲಿ, ಮುಕ್ತಿಯನ್ನೂ ಮೀರಿ, ಜೀವನದ ಪರಾಕಾಷ್ಠತೆಗೆ ಏರುತ್ತದೆ ಎನ್ನುವುದು ಭಾಗವತದ ಅಭಿಪ್ರಾಯ.

ಮುಕ್ತಿಯ ನಾನಾ ವಿಧಗಳನ್ನು – ಅಂದರೆ **ಸಾರೂಪ್ಯ** (ಆರಾಧ್ಯದೈವದ ಸ್ವರೂಪವನ್ನೇ ಹೊಂದುವುದು), **ಸಾಲೋಕ್ಯ** (ಆರಾಧ್ಯದೈವದ ಲೋಕದಲ್ಲಿ ಇರುವುದು ಉದಾ: ವೈಕುಂಠ) ಮುಂತಾದವುಗಳನ್ನು ವಿವರಿಸಿದರೂ, ಭಾಗವತವು, 'ಪರಾಭಕ್ತಿ'ಗೆ ಹೆಚ್ಚಿನ ಒಲವು ತೋರಿದೆ. 'ಪರಾಭಕ್ತಿ' ಎಂದರೆ ಅತ್ಯುನ್ನತ ತೀವ್ರತಮ ಭಗವದ್ಭಕ್ತಿ. ಪರಾಭಕ್ತಿಯೇ ಜೀವನದ ಗುರಿಯಾಗಿರಬೇಕೆಂಬುದು ಭಾಗವತದ ಆಶಯ. ಪರಾಭಕ್ತಿಯಲ್ಲಿ ಆರಾಧ್ಯದೈವಕ್ಕೂ, ಭಕ್ತನಿಗೂ ಒಂದು ತೆಳುವಾದ ದ್ವೈತ ಭಾವನೆಯ ಪರದೆ ಇರುತ್ತದೆ. ಇಲ್ಲಿ ಭಕ್ತನಿಗೂ ದೈವಕ್ಕೂ ಏಕತ್ವವಿರುವುದಿಲ್ಲ.

### ಧರ್ಮಾನುಷ್ಠಾನ

ವರ್ಣಾಶ್ರಮ ಧರ್ಮವೆಂದರೆ, ವೃತ್ತಿ ಆಧಾರಿತ ಹಾಗೂ ಮಾನವಜೀವನದ ವಿವಿಧ ಘಟ್ಟಗಳಲ್ಲಿ ಅನುಸರಿಸಬೇಕಾದ ಕರ್ತವ್ಯಗಳು. ಈ ಕರ್ತವ್ಯಗಳ ಪಾಲನೆಯಿಂದ ಎಲ್ಲ ಮಾನವರೂ, ಆತ್ಮಸಾಕ್ಷಾತ್ಕಾರದ ಹಂತಗಳಿಗೆ ಬೆಳೆಯಬಹುದು. ಜನ್ಮಕ್ಕಿಂತ ಶೀಲ, ನಡವಳಿಕೆಗಳೇ ಮಾನವನ ಗೌರವ ಮತ್ತು ಪ್ರತಿಷ್ಠೆಗೆ ಹೆಬ್ಬಾಗಿಲು. ಜನ್ಮತಃ ಬಂದ ಕೆಲವು ಪರಿಮಿತಿಗಳನ್ನು ಭಕ್ತಿಯ ಮೂಲಕ ದಾಟಬಹುದು. ಇದು ಭಾಗವತದ ಅಭಿಪ್ರಾಯ.

ಉತ್ಕಟ ಧಾರ್ಮಿಕ ಭಾವನೆಗಳು ಗೌರವಕ್ಕೆ ಎಡೆಮಾಡಿಕೊಡುತ್ತವೆ. ಇದು ಪೂಜೆಯಾಗಿ ಅಭಿವ್ಯಕ್ತವಾಗುತ್ತದೆ. ವಿಧ್ಯುಕ್ತ ಪೂಜೆಯೂ ಭಕ್ತಿಪಂಥದ ಒಂದು ಅಂಶ. ಪ್ರತಿಮಾಪೂಜೆ, ಪ್ರತೀಕಪೂಜೆ, ಸೂರ್ಯಭಗವಾನನ ಪೂಜೆ, ಗಂಗಾದಿ ಪವಿತ್ರ ನದಿಗಳ ಪೂಜೆ, ಪರ್ವತರಾಜ ಹಿಮಾಲಯದ ಪೂಜೆ – ಇವೆಲ್ಲವೂ ಭಕ್ತಿಪೋಷಕ. ಹಾಗೆಯೇ ನಿಜವಾದ ಭಕ್ತನು ಭಗವಂತನನ್ನು ತನಗಾಗಿ ಏನನ್ನೂ ಬೇಡಬಾರದು; ಏಕೆಂದರೆ ಭಗವಂತನು ಸರ್ವಜ್ಞನಾದುದರಿಂದ ಭಕ್ತನಿಗೆ ಯಾವುದು ಉತ್ತಮವೆಂಬುದು ಅವನಿಗೆ ತಿಳಿದಿದೆ. ಅದರಂತೆ ಅವನು ಭಕ್ತನಿಗೆ ಮಾರ್ಗದರ್ಶನ ಮಾಡುವನು ಎಂದು ಭಾಗವತವು ಅಭಿಪ್ರಾಯಪಡುತ್ತದೆ.

ಜೀವನದ ಅಂತಿಮ ಗುರಿ ಮುಕ್ತಿ. ಎಲ್ಲ ಬಂಧನಗಳಿಂದ ಕಳಚಿಕೊಂಡು ತನ್ನ ಸಹಜ ಸ್ಥಿತಿಯಾದ ದೈವತ್ವಕ್ಕೆ ಅಥವಾ ಆನಂದಕ್ಕೆ ಹಿಂತಿರುಗುವುದೇ ಈ ಮುಕ್ತಿಯ ಸ್ಥಿತಿ. ಭಕ್ತಿ ಮತ್ತು ಜಪಗಳು ಚಿತ್ತಶುದ್ಧಿಗೆ ಫಲಕಾರಿಯಾದ ಮಾರ್ಗಗಳು. ಚಿತ್ತಶುದ್ಧಿಯಿಂದ ಮುಕ್ತಿ. ಇದು ಭಾಗವತದ ನಿಲುವು.

ಭಾಗವತದ ಇನ್ನೊಂದು ವೈಶಿಷ್ಟ್ಯವೆಂದರೆ, ಮಾತೃಭೂಮಿಯ ಬಗ್ಗೆ ಅಪಾರ ಗೌರವವನ್ನು ಬೆಳೆಸಿಕೊಳ್ಳಲು ಅದು ಒತ್ತಿ ಹೇಳಿರುವುದು. ರಾಜರ್ಷಿ ಭರತನ ಹೆಸರಿನಲ್ಲಿ ನಮ್ಮ ಮಾತೃಭೂಮಿಯನ್ನು ಭಾರತವರ್ಷವೆಂದು ಕರೆಯಲಾಗಿದೆ. ಭಾರತವರ್ಷವು ಕೇವಲ ಭೌಗೋಳಿಕಭಾಗವಲ್ಲ; ಅದು ನಾಗರಿಕತೆಯ ಮೂಲಸ್ಥಾನ; ನೈತಿಕತೆಯ, ಆಧ್ಯಾತ್ಮಿಕ ಸಂಸ್ಕೃತಿಯ ನೆಲೆವೀಡು ಎಂದು ಭಾಗವತದಲ್ಲಿ ಶ್ಲಾಘಿಸಿದೆ.

ಭಾಗವತವು ಮುಖ್ಯವಾಗಿ ಭಕ್ತಿಮಾರ್ಗದ ಕೃತಿ. ಅದರಲ್ಲಿ ಕಾಣಬರುವ ಅಧ್ಯಾತ್ಮವಿದ್ಯೆ ಪಾರಮಾರ್ಥಕ್ಕೆ ಸಂಬಂಧಿಸಿದ್ದು. ಆದರೆ ಅದು ಭಕ್ತಿಸಿದ್ಧಾಂತಕ್ಕೆ ಬೆಂಬಲ ನೀಡುತ್ತದೆ.... ಜೀವನದಲ್ಲಿ ಏನಾದರೂ ಸಾಧಿಸಬೇಕೆಂದರೆ ಭಗವಂತನಲ್ಲಿ ಭಕ್ತಿ ಇಡುವುದೇ ಶ್ರೇಷ್ಠ ಮಾರ್ಗ ಎಂದು ಭಾಗವತ ಹೇಳುವುದು.

ಭಾಗವತವು ಮಾಡಿರುವ ಮಹತ್ಕಾರ್ಯವೆಂದರೆ, ಶ್ರೀಕೃಷ್ಣನ ವೀರಕಥೆಯನ್ನು, ಅವನ ಅನ್ಯಾದೃಶ ವ್ಯಕ್ತಿತ್ವವನ್ನು, ಶಕ್ತಿಯುತ, ಮನೋಹರ ಶೈಲಿಯ ಭಾಷೆಯಲ್ಲಿ, ಸೊಗಸಾದ ಕಾವ್ಯರೂಪದಲ್ಲಿ ಹಿಡಿದಿಟ್ಟಿರುವುದು, ಶ್ರೀಕೃಷ್ಣನು ಲಕ್ಷಾಂತರ ಹಿಂದೂಗಳ ಮನಸ್ಸನ್ನು ಸೂರೆಗೊಂಡು, ಅವರೆಲ್ಲರ ಆರಾಧ್ಯದೈವವಾಗಿದ್ದಾನೆ. ಅದು ಈ ಅನುಪಮ ಅನ್ಯಾದೃಶ ಕೃತಿಯ ಕಾರಣದಿಂದಲೇ.

(ಆಧಾರ: ***ಭಾಗವತ – ಒಂದು ಅಧ್ಯಯನ,*** ಕನ್ನಡಾನುವಾದ: ಎನ್. ಪ್ರಭಾಕರ)

# ಕಪಿಲೋಪದೇಶ

ಎಚ್.ವಿ.ನಾಗರಾಜರಾವ್

ಭಾಗವತದಲ್ಲಿ ಬರುವ ಕಪಿಲೋಪದೇಶವು ಜ್ಞಾನ-ಭಕ್ತಿಗಳ ಸುಧಾಮೃತ. ಇದರಲ್ಲಿ ಬರುವ ಮುಖ್ಯಾಂಶಗಳನ್ನು ಸೋದಾಹರಣವಾಗಿ ಪರಿಚಯಮಾಡಿಕೊಟ್ಟಿರುವ ಮಾನ್ಯ ಲೇಖಕರು ಪ್ರಸಿದ್ಧ ಸಂಸ್ಕೃತ ವಿದ್ವಾಂಸರು; ದೇಶವಿದೇಶಗಳಲ್ಲಿ ಸಂಸ್ಕೃತ ಪ್ರಚಾರವನ್ನು ಮಾಡಿರುವ ಮಹನೀಯರು.

ಶ್ರೀಮದ್ ಭಾಗವತವು ಭಾರತೀಯ ಸಾಹಿತ್ಯದಲ್ಲಿ ಅಸಾಧಾರಣ ಸ್ಥಾನವನ್ನಲಂಕರಿಸಿರುವ ಮಹಾಪುರಾಣ. ಯಾವುದೇ ಪಂಡಿತನ ವಿದ್ಯೆಯನ್ನು ಅಳೆಯಲು ಈ ಮಹಾಪುರಾಣವು ಒರೆಗಲ್ಲಿನಂತಿದೆ. **'ವಿದ್ಯಾವತಾಂ ಭಾಗವತೇ ಪರೀಕ್ಷಾ'** – "ವಿದ್ಯಾವಂತರಿಗೆ ಭಾಗವತವೇ ಪರೀಕ್ಷೆ" ಎಂಬ ಉಕ್ತಿಯೇ ಪ್ರಚಲಿತದಲ್ಲಿದೆ.

**ನಿಗಮಕಲ್ಪತರೋರ್ಗಲಿತಂ ಫಲಂ**
**ಶುಕಮುಖಾದಮೃತದ್ರವಸಂಯುತಮ್ ।**
**ಪಿಬತ ಭಾಗವತಂ ರಸಮಾಲಯಂ**
**ಮುಹುರಹೋ ರಸಿಕಾ ಭುವಿ ಭಾವುಕಾಃ ॥**

ಎಂದು ಗ್ರಂಥವೇ ಹೇಳುವಂತೆ ಇದು ವೇದಕಲ್ಪವೃಕ್ಷದಿಂದ ಉದುರಿದ ಮಾಗಿದ ಹಣ್ಣು. ಶುಕನ (ಗಿಳಿಯ–ಮಹರ್ಷಿಯ) ಮುಖದ ಸ್ಪರ್ಶದಿಂದ ಇದು ಅಮೃತದ್ರವದಿಂದ ತುಂಬಿದೆ. ರಸಿಕರೂ ಭಾವುಕರೂ ಇದನ್ನು ಮತ್ತೆ ಮತ್ತೆ ಸವಿಯಬೇಕು. ಈ ಗ್ರಂಥ ತಿಳಿಸುವ ವಿಷಯ ಯಾವುದು? **'ಧರ್ಮಃ ಪ್ರೋಜ್ಝಿತಕೈತವೋಽತ್ರ ವಿಷಯಃ** – 'ಯಾವ ವಂಚನೆಯೂ ಇಲ್ಲದ, ತೋರಿಕೆಯ ಸೋಂಕೂ ಇಲ್ಲದ ಧರ್ಮ ಇಲ್ಲಿ ಪ್ರತಿಪಾದ್ಯವಾದ ವಿಷಯ.' ನಾವು ಕಲಿಯಬೇಕಾದ ನೂರಾರು ವಿಚಾರಗಳು ಈ ಗ್ರಂಥದಲ್ಲಿದೆ. ಅದರಲ್ಲಿ ದಾರ್ಶನಿಕ ಹಿನ್ನೆಲೆಯನ್ನುಳ್ಳ ಸಾರಭೂತವಾದ ಭಾಗ 'ಕಪಿಲೋಪದೇಶ'.

ಮಹಾಭಾರತಕ್ಕೆ ಶ್ರೀಮದ್‌ಭಗವದ್ಗೀತೆ ಮತ್ತು ವಿಷ್ಣುಸಹಸ್ರನಾಮ ಎಂಬವು ಎರಡು ಕಣ್ಣುಗಳಂತೆ ಎನ್ನುತ್ತಾರೆ. ಹಾಗೆಯೇ ಶ್ರೀಮದ್‌ಭಾಗವತಕ್ಕೆ **ಉದ್ಧವಗೀತೆ** ಮತ್ತು **ಕಪಿಲೋದೇಶ** ಎರಡು ಕಣ್ಣುಗಳಂತೆ ಇವೆ.

### ಕಪಿಲ ಮಹರ್ಷಿ

**ಸಿದ್ಧಾನಾಂ ಕಪಿಲೋ ಮುನಿಃ** – ಕಪಿಲನು ಸಿದ್ಧರಲ್ಲೆಲ್ಲ ಶ್ರೇಷ್ಠನು ಎಂಬುದು ಭಗವದ್ಗೀತೆಯ ನುಡಿ (೧೦.೨೬). ಭಾಗವತವೇ ತಿಳಿಸಿರುವಂತೆ ವಿಷ್ಣುವಿನ ಇಪ್ಪತ್ತೆರಡು ಅವತಾರಗಳಲ್ಲಿ ಕಪಿಲಾವತಾರ ಐದನೆಯದು.

**ಪಂಚಮಃ ಕಪಿಲೋ ನಾಮ ಸಿದ್ಧೇಶಃ ಕಾಲವಿಷ್ಣುತಮ್ ।**
**ಪ್ರೋವಾಚಾಸುರಯೇ ಸಾಂಖ್ಯಂ**
**ತತ್ತ್ವಗ್ರಾಮ ವಿನಿರ್ಣಯಮ್॥** (೧: ೩. ೧)

ಕಪಿಲನ ಹುಟ್ಟಿನ ಬಗೆಗೆ ಹೇಳಬೇಕೆಂದರೆ ಅವನು ಬ್ರಹ್ಮನ ಮೊಮ್ಮಗ. ಬ್ರಹ್ಮನ ಒಬ್ಬ ಮಾನಸಪುತ್ರ ಕರ್ದಮಪ್ರಜಾಪತಿ.



ಸ್ವಾಯಂಭುವ ಮನುವಿನ ಮಗಳು ದೇವಹೂತಿ. ಕರ್ದಮನು ಬ್ರಹ್ಮನ ಆಜ್ಞೆಯಂತೆ ದೇವಹೂತಿಯ ಪತಿಯಾಗುತ್ತಾನೆ. ಈ ದಂಪತಿಗಳಿಗೆ ಒಂಬತ್ತು ಜನ ಹೆಣ್ಣುಮಕ್ಕಳಾಗುತ್ತಾರೆ. ಅವರೆಲ್ಲರಿಗೂ ಮದುವೆಯನ್ನು ಮಾಡಿಸಿ, ಕರ್ದಮನು ಸಂನ್ಯಾಸವನ್ನು ಸ್ವೀಕರಿಸಿ ಕಾಡಿಗೆ ತೆರಳಲು ಬಯಸುತ್ತಾನೆ. ಆದರೆ ದೇವಹೂತಿ ತನಗೆ ಒಬ್ಬ ಮಗನು ಹುಟ್ಟುವವರೆಗೂ ಪತಿಯು ತನ್ನೊಡನೆ ಇರಬೇಕು ಎಂದು ಕೇಳಿಕೊಳ್ಳುತ್ತಾಳೆ. ಅವನು ಅದಕ್ಕೆ ಒಪ್ಪಿ ನಿಲ್ಲುತ್ತಾನೆ. ಆಗ ಹುಟ್ಟಿದ ಮಗುವೇ ಕಪಿಲ. ಅವನು ಭಗವಂತನ ಅವತಾರವೆಂದು ತಾಯಿಗೂ ತಂದೆಗೂ ತಿಳಿಯುತ್ತದೆ. ತಂದೆಯೇ ಮಗನನ್ನು ಸ್ತುತಿಸಿ ಅನಂತರ ತಪಸ್ಸಿಗೆ ತೆರಳುತ್ತಾನೆ.

ಜನ್ಮದಿಂದಲೇ ಜ್ಞಾನಿಯಾಗಿದ್ದ ಕಪಿಲನು ಚಿಕ್ಕ ವಯಸ್ಸಿನಲ್ಲೇ ವಿರಕ್ತನಾಗಿ ಮನೆಯನ್ನು ತ್ಯಜಿಸಲು ಅಪೇಕ್ಷಿಸುತ್ತಾನೆ. ತಾಯಿ ದೇವಹೂತಿಯು "ನನಗೂ ಆತ್ಮಜ್ಞಾನವನ್ನು ಉಪದೇಶಿಸಿ ನೀನು ಹೋಗಬೇಕು" ಎಂದು ಬೇಡಿಕೊಳ್ಳುತ್ತಾಳೆ. "ಆಗಬಹುದು" ಎಂದು ಹೇಳಿ ತಾಯಿಗೆ ಕಪಿಲನು ಮಾಡಿದ ಉಪದೇಶವೇ 'ಕಪಿಲೋಪದೇಶ.' ಇದು ಶ್ರೀಮದ್‌ಭಾಗವತದ ಮೂರನೆಯ ಸ್ಕಂಧದಲ್ಲಿ ಇಪ್ಪತ್ತೈದನೆಯ ಅಧ್ಯಾಯದಿಂದ ಮೂವತ್ತಮೂರನೆಯ ಅಧ್ಯಾಯದವರೆಗೆ ಹಬ್ಬಿದೆ. ಅಂದರೆ ಇದರಲ್ಲಿ ಒಟ್ಟು ಒಂಬತ್ತು ಅಧ್ಯಾಯಗಳು, ಸುಮಾರು ಮುನ್ನೂರ ನಲವತ್ತನಾಲ್ಕು ಶ್ಲೋಕಗಳು ಇವೆ. ಮೊದಲನೆಯ ಆರು ಶ್ಲೋಕಗಳು ಪೀಠಿಕಾ ರೂಪದಲ್ಲಿವೆ. ಅನಂತರ ದೇವಹೂತಿ–ಕಪಿಲರ ಸಂವಾದವಿದೆ.

ಕಪಿಲಮಹರ್ಷಿಯು ಸಾಂಖ್ಯ ದರ್ಶನದ ಪ್ರಥಮಾಚಾರ್ಯ ಎಂದು ಪ್ರಸಿದ್ಧಿಯಿದೆ. ಕಪಿಲನು ರಚಿಸಿದ ಸಾಂಖ್ಯಸೂತ್ರಗಳು ಈಗ ದೊರಕುವುದಿಲ್ಲ. ಕಪಿಲನ ಸೂತ್ರಗಳೆಂಬ ಹೆಸರಿನಿಂದ ಸಾಂಖ್ಯಸೂತ್ರಗಳು ಈಗ ಪ್ರಚಲಿತವಾಗಿ ಮುದ್ರಿತವಾಗಿದ್ದರೂ ಅವು ಈಚಿನವು. ಪ್ರಾಯಶಃ ಹದಿನಾಲ್ಕನೆಯ ಶತಮಾನದಲ್ಲಿ ಅವು ರಚಿತವಾಗಿರಬೇಕು. ಆದಿಶಂಕರಾಚಾರ್ಯರು ಬ್ರಹ್ಮಸೂತ್ರಭಾಷ್ಯದಲ್ಲಿ ಸಾಂಖ್ಯಮತವನ್ನು ಖಂಡಿಸಿದ್ದಾರೆ. ಅದು ಈಶ್ವರಕೃಷ್ಣನ ಸಾಂಖ್ಯಕಾರಿಕೆಗಳ ಆಧಾರದಿಂದ ನಿಂತಿರುವ ನಿರೀಶ್ವರ ಸಾಂಖ್ಯ. ಅದರಲ್ಲಿ ಭಗವಂತ ಎಂಬ ವಸ್ತುವೇ ಇಲ್ಲ, ಭಕ್ತಿ ಎಂಬುದಕ್ಕೆ ಅರ್ಥವೇ ಇಲ್ಲ. ಅದನ್ನು ಎಲ್ಲ ಆಚಾರ್ಯರೂ ನಿರಾಕರಿಸಿರುವುದು ಉಚಿತವಾಗಿದೆ.

## ಭಕ್ತಿಯೇ ಮುಕ್ತಿಯ ಉಪಾಯ

ಶ್ರೀಮದ್‌ಭಾಗವತದಲ್ಲಿ ಇರುವ ಕಪಿಲೋಪದೇಶದಲ್ಲೂ ಸಾಂಖ್ಯದರ್ಶನದ ಪ್ರತಿಪಾದನೆಯಿದೆ. ಆದರೆ ಇದು ಸೇಶ್ವರಸಾಂಖ್ಯ. ಇದರಲ್ಲಿ ಭಕ್ತಿಯೋಗಕ್ಕೇ ಅಗ್ರಪೂಜೆ. ಮೊದಲನೆಯ ಅಧ್ಯಾಯದಲ್ಲಿ ಭಕ್ತಿಯ ಸ್ವರೂಪವನ್ನು ಹೀಗೆ ವರ್ಣಿಸಲಾಗಿದೆ:

**ಯೋಗ ಆಧ್ಯಾತ್ಮಿಕಃ ಪುಂಸಾಂ ಮತೋ ನಿಃಶ್ರೇಯಸಾಯ ಮೇ।**
**ಅತ್ಯಂತೋಪರತಿರ್ಯತ್ರ ದುಃಖಸ್ಯ ಚ ಸುಖಸ್ಯ ಚ ॥**
(೩ : ೨೫: ೧೯)

"ಆಧ್ಯಾತ್ಮಿಕಯೋಗವು ಜೀವರ ನಿಃಶ್ರೇಯಸಕ್ಕೆ (ಮೋಕ್ಷಕ್ಕೆ) ಕಾರಣ ಎಂದು ನನ್ನ ಅಭಿಪ್ರಾಯ. ಆ ಮೋಕ್ಷದಲ್ಲಿ ದುಃಖಕ್ಕೂ ಸುಖಕ್ಕೂ ಆತ್ಯಂತಿಕ ಸಮಾಪ್ತಿ ಉಂಟಾಗುತ್ತದೆ."

ಹೀಗೆ ತತ್ತ್ವೋಪದೇಶದ ಆರಂಭ. ಮುಂದೆ ಭಕ್ತಿಯೇ ಮುಕ್ತಿಯ ಏಕಮಾತ್ರೋಪಾಯ ಎಂದು ಕಪಿಲನು ತಾಯಿ ದೇವಹೂತಿಗೆ ಸ್ಪಷ್ಟವಾಗಿ ಹೇಳುತ್ತಾನೆ.

**ನ ಯುಜ್ಯಮಾನಯಾ ಭಕ್ತ್ಯಾ ಭಗವತ್ಯಖಿಲಾತ್ಮನಿ ।**
**ಸದೃಶೋಽಸ್ತಿ ಶಿವಃ ಪಂಥಾಃ ಯೋಗಿನಾಂ ಬ್ರಹ್ಮಸಿದ್ಧಯೇ॥** (೩:೨೫:೧೯)

ಅಖಿಲಸ್ವರೂಪನಾದ ಭಗವಂತನಲ್ಲಿ ಇಡುವ ಭಕ್ತಿಗೆ ಸಮಾನವಾದ ಇನ್ನೊಂದು ಮಂಗಳಮಯವಾದ ಮಾರ್ಗ ಬ್ರಹ್ಮಸಿದ್ಧಿಯನ್ನು ಅಪೇಕ್ಷಿಸುವ ಯೋಗಿಗಳಿಗೆ ಇಲ್ಲ ಎಂದು ಕಪಿಲನು ಭಕ್ತಿಯ ಪಾರಮ್ಯವನ್ನು ಎತ್ತಿಹಿಡಿದಿದ್ದಾನೆ. ಯಾರು ಭಗವಂತನಲ್ಲೇ ಮನಸ್ಸನ್ನಿಟ್ಟು ತಪಸ್ಸನ್ನು ಆಚರಿಸುವರೋ ಅಂಥವರ ಸಂಗವನ್ನು ಮಾಡಬೇಕು. ಆ ಸತ್ಸಂಗವು ಎಲ್ಲ ಸಂಗದೋಷವನ್ನೂ ಕಳೆಯುತ್ತದೆ. ಯೋಗಮಾರ್ಗದಲ್ಲಿ ಕ್ರಮಿಸಲು ಭಕ್ತಿಯು ಪ್ರಥಮಸಾಧನ. ಭಕ್ತರಿಗೆ ಭಗವಂತನೇ ಅತ್ಯಂತ ಸಮೀಪ, ಅತ್ಯಂತ ಪ್ರಿಯ. ಅವರಿಗೆ ಭಗವಂತನೇ ಆತ್ಮ, ಮಗ, ಮಿತ್ರ, ಗುರು, ಇಷ್ಟದೇವತೆ – ಎಲ್ಲವೂ.

**ಜ್ಞಾನವೈರಾಗ್ಯಯುಕ್ತೇನ ಭಕ್ತಿಯೋಗೇನ ಯೋಗಿನಃ ।**
**ಕ್ಷೇಮಾಯ ಪಾದಮೂಲಂ ಮೇ**
**ಪ್ರವಿಶಂತ್ಯಕುತೋಭಯಮ್** ॥ (೩:೨೫:೪೩)

ಜ್ಞಾನವೈರಾಗ್ಯಸಂಪನ್ನವಾದ ಭಕ್ತಿಯೋಗದಿಂದಲೇ ಯೋಗಿಗಳು ಶಾಶ್ವತ ಕ್ಷೇಮಕ್ಕಾಗಿ, ಎಲ್ಲ ಭಯಗಳನ್ನೂ ನಿವಾರಿಸುವ ನನ್ನ ಪಾದಮೂಲವನ್ನು ಪ್ರವೇಶಿಸುತ್ತಾರೆ ಎಂಬುದು ಇಲ್ಲಿ ಕಪಿಲಮಹರ್ಷಿಯ ಉಪದೇಶ.

## ೨೪ ತತ್ತ್ವಗಳು

ಎರಡನೆಯ ಅಧ್ಯಾಯದಲ್ಲಿ ಭಗವಾನ್ ಕಪಿಲನು ತತ್ತ್ವಗಳ ಲಕ್ಷಣಗಳನ್ನು ಹೇಳುತ್ತಾನೆ. ಕಾರ್ಯಕಾರಣಕರ್ತೃತ್ವವು ಪ್ರಕೃತಿಯದು, ಸುಖದುಃಖಭೋಕ್ತೃತ್ವವು ಪುರುಷನದು ಎಂದು ಕಪಿಲನು ಬೋಧಿಸುತ್ತಾನೆ. ಆಗ ದೇವಹೂತಿಯು 'ಪ್ರಕೃತಿ' ಮತ್ತು 'ಪುರುಷ' ಎಂಬ ತತ್ತ್ವಗಳ ಲಕ್ಷಣವೇನೆಂದು ಕೇಳುತ್ತಾಳೆ. ತ್ರಿಗುಣಾತ್ಮಕವೂ ನಿತ್ಯವೂ ಸದಸದಾತ್ಮಕವೂ ಆದುದನ್ನು 'ಪ್ರಕೃತಿ'ಯೆಂದೂ, 'ಪ್ರಧಾನ'ವೆಂದೂ ಕರೆಯುತ್ತಾರೆ. ಇದರಲ್ಲಿ ಇಪ್ಪತ್ತನಾಲ್ಕು ತತ್ತ್ವಗಳು ಸೇರಿವೆ. ಅವು ಹೀಗಿವೆ : ಐದು ಮಹಾಭೂತಗಳು (ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶ), ಪಂಚತನ್ಮಾತ್ರಗಳು (ಗಂಧ, ರಸ, ರೂಪ, ಸ್ಪರ್ಶ, ಶಬ್ದ), ಐದು

ಕರ್ಮೇಂದ್ರಿಯಗಳು (ವಾಕ್, ಪಾಣಿ, ಪಾದ, ಪಾಯೂ, ಉಪಸ್ಥ), ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಎಂಬ ನಾಲ್ಕು ಅಂತಃಕರಣಗಳು.

### ಭಗವದ್ವಿಚಾರ

ಇವುಗಳಿಗೆ ಅತೀತವಾದ ಇಪ್ಪತ್ತೈದನೆಯ ತತ್ತ್ವವೇ ಪುರುಷ, ಅದೇ ಕಾಲ.

**ಅಂತಃಪುರುಷರೂಪೇಣ ಕಾಲರೂಪೇಣ ಯೋ ಬಹಿಃ ।**
**ಸಮನ್ವೇತ್ಯೇಷ ಸತ್ತ್ವಾನಾಂ ಭಗವನ್ ಆತ್ಮಮಾಯಯಾ ॥**
(೩:೨೬:೧೮)

ಭಗವಂತನು ತನ್ನದೇ ಆದ ಮಾಯೆಯಿಂದ ಒಳಗೆ ಪುರುಷರೂಪದಲ್ಲೂ ಹೊರಗೆ ಕಾಲರೂಪದಲ್ಲೂ ಇದ್ದಾನೆ. ತನ್ನಲ್ಲೇ ಇರುವ ವಿಶ್ವವನ್ನು ಅವನೇ ಅಭಿವ್ಯಕ್ತಗೊಳಿಸುತ್ತಾನೆ. ಇತ್ಯಾದಿ ವಿಚಾರಗಳನ್ನು ಕಪಿಲನು ವರ್ಣಿಸುತ್ತಾನೆ. ವಿರಾಟ್ ಪುರುಷನ ವರ್ಣನೆಯೂ ಈ ಅಧ್ಯಾಯದಲ್ಲಿದೆ. ಅನಂತರ ಅಧ್ಯಾಯಸಮಾಪ್ತಿಯಲ್ಲಿ ಮತ್ತೆ ಭಕ್ತಿಯ ಆವಶ್ಯಕತೆಯನ್ನು ಒತ್ತಿ ಹೇಳಿದೆ:

**ತಮಸ್ಮಿನ್ ಪ್ರತ್ಯಗಾತ್ಮಾನಂ**
**ಧಿಯಾ ಯೋಗಪ್ರವೃತ್ತಯಾ ।**
**ಭಕ್ತ್ಯಾ ವಿರಕ್ತ್ಯಾ ಜ್ಞಾನೇನ**
**ವಿವಿಚ್ಯಾತ್ಮನಿ ಚಿಂತಯೇತ್ ॥** (೩:೨೬:೭೨)

ಇಂಥ ಪ್ರತ್ಯಗಾತ್ಮನನ್ನು ಯೋಗಪ್ರಯುಕ್ತವಾದ ಬುದ್ಧಿಯಿಂದಲೂ ಭಕ್ತಿ–ವಿರಕ್ತಿ–ಜ್ಞಾನಗಳಿಂದಲೂ ವಿವೇಚಿಸಿ ಆತ್ಮನಲ್ಲಿ ಧ್ಯಾನಿಸಬೇಕು. ಮೂರನೆಯ ಅಧ್ಯಾಯದಲ್ಲಿ ಪುರುಷನು ಪ್ರಕೃತಿಯ ಜೊತೆಯಲ್ಲಿದ್ದರೂ ಪ್ರಕೃತಿಯ ಗುಣಗಳು ಅವನಿಗೆ ಅಂಟುವುದಿಲ್ಲ ಎಂದು ಪ್ರತಿಪಾದಿಸಲಾಗಿದೆ.

**ಪ್ರಕೃತಿಸ್ಥೋಽಪಿ ಪುರುಷೋ ನಾಜ್ಯತೇ ಪ್ರಾಕೃತೈರ್ಗುಣೈಃ ।**
**ಅವಿಕಾರಾದ್ ಅಕರ್ತೃತ್ವಾನ್ನಿರ್ಗುಣತ್ವಾಜ್ಜಲಾರ್ಕವತ್ ॥**
(೩ : ೨೭: ೧)

ಪುರುಷನಿಗೆ (ಎಂದರೆ ಜೀವನಿಗೆ) ಗುಣಸಂಸರ್ಗ ವಿಲ್ಲದಿದ್ದರೂ ಅಹಂಕಾರದ ಕಾರಣದಿಂದ ತಾನೇ ಕರ್ತಾರ ಎಂಬ ಭ್ರಾಂತಿಯುಂಟಾಗಿ ಸಂಸಾರಬದ್ಧನಾಗುತ್ತಾನೆ. ಇದಕ್ಕೆ ಪರಿಹಾರವೇನೆಂದರೆ ತೀವ್ರವಾದ ಭಕ್ತಿಯೋಗ. ಇದರ ಎಲ್ಲ ಲಕ್ಷಣಗಳನ್ನು ಇಲ್ಲಿ ತಿಳಿಸಲಾಗಿದೆ.

### ಕೈವಲ್ಯ ಸಿದ್ಧಿ

ಪ್ರಕೃತಿಯೂ ನಿತ್ಯ, ಪುರುಷನೂ ನಿತ್ಯ. ಹೀಗಿರುವಾಗ ಪುರುಷನು ಪ್ರಕೃತಿಯ ಸಂಬಂಧವನ್ನು ಕಡಿದುಕೊಳ್ಳುವುದು ಹೇಗೆ? ಎಂಬ ಪ್ರಶ್ನೆಯನ್ನು ದೇವಹೂತಿ ಕೇಳುತ್ತಾಳೆ. ಜ್ಞಾನದಿಂದ ಭಕ್ತಿಯು ತೀವ್ರವಾದಾಗ ವೈರಾಗ್ಯವೂ ಬಲವುಳ್ಳದ್ದಾಗಿ ತಪೋಯುಕ್ತವಾದ ಯೋಗವಾಗಿ ಪರಿಣಮಿಸಿ, ಸಮಾಧಿಸ್ಥಿತಿಯು ಒದಗುತ್ತದೆ; ಅದು ಪ್ರಕೃತಿ ಸಂಬಂಧವನ್ನು ಸುಟ್ಟುಹಾಕುತ್ತದೆ ಎಂಬ ಉತ್ತರವನ್ನು ಭಗವಂತನು ನೀಡುತ್ತಾನೆ. ಯಾವ ಜೀವನು ಆತ್ಮಾರಾಮನಾಗಿ ಭಗವಂತನಲ್ಲಿ ಮನಸ್ಸನ್ನು ಅಚಲವಾಗಿ ನಿಲ್ಲಿಸುವನೋ ಅವನಿಗೆ ಪ್ರಕೃತಿಯು ಯಾವ ತೊಂದರೆಯನ್ನೂ ಮಾಡಲಾರದು. ಅಂಥ ಆತ್ಮಾರಾಮನು ಕೈವಲ್ಯ(ಮೋಕ್ಷ)ವನ್ನು ಪಡೆದುಕೊಳ್ಳುವನು.

### ಯೋಗ ಸಮನ್ವಯ

ಇಲ್ಲಿ ಅಷ್ಟಾಂಗಯೋಗದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಎಂಬ ಅಂಗಗಳನ್ನೂ ವಿವರಿಸಲಾಗಿದೆ. ಹೀಗೆ ಕಪಿಲೋಪದೇಶವು ಸಾಂಖ್ಯ–ಯೋಗಶಾಸ್ತ್ರಗಳ ಸಮನ್ವಯವನ್ನು ಸಾಧಿಸಿದೆ. ಧ್ಯಾನದಲ್ಲಿ ವಿಷ್ಣುವನ್ನು ಧ್ಯೇಯವಾಗಿ ಸ್ವೀಕರಿಸಬೇಕೆಂಬ ದೃಷ್ಟಿಯಿಂದ ವಿಷ್ಣುವಿನ ಸ್ವರೂಪವನ್ನು ಸುಂದರವಾಗಿ ವರ್ಣಿಸಲಾಗಿದೆ. ಇವೆಲ್ಲವೂ ನಾಲ್ಕನೆಯ ಅಧ್ಯಾಯದಲ್ಲಿವೆ.

ಐದನೆಯ ಅಧ್ಯಾಯದಲ್ಲಿ ಭಕ್ತಿಯೋಗದ ವಿಶೇಷ ವರ್ಣನೆಯನ್ನು ಕಾಣುತ್ತೇವೆ. ತಾಮಸಭಕ್ತಿ, ರಾಜಸಭಕ್ತಿ, ಸಾತ್ತ್ವಿಕಭಕ್ತಿಗಳ ಸ್ವರೂಪಗಳನ್ನು ಇಲ್ಲಿ ವಿವರಿಸಲಾಗಿದೆ. ಡಂಭಾಚಾರಕ್ಕಾಗಿ ಮಾತ್ಸರ್ಯಪ್ರೇರಿತವಾಗಿ ಮಾಡುವುದು ತಾಮಸಭಕ್ತಿ. ಕೀರ್ತಿಗಾಗಿ, ಐಶ್ವರ್ಯಕ್ಕಾಗಿ ಮಾಡುವುದು ರಾಜಸಭಕ್ತಿ. ಕರ್ಮವನ್ನು ಕಳೆದುಕೊಳ್ಳುವುದಕ್ಕಾಗಿ ಭಗವ ದರ್ಪಣ ಬುದ್ಧಿಯಿಂದ ಮಾಡುವುದು ಸಾತ್ತ್ವಿಕಭಕ್ತಿ. ನಿಜ ವಾದ ಭಕ್ತರು ಏನನ್ನೂ ಬೇಡುವುದಿಲ್ಲ; ಮುಕ್ತಿಯನ್ನೂ ಅಪೇಕ್ಷಿಸದೆ ಅವರು ಭಗವಂತನ ಸೇವೆಯನ್ನು ಮಾಡುತ್ತಾರೆ. ಎಲ್ಲಿಯವರೆಗೆ ಎಲ್ಲೆಲ್ಲೂ ಇರುವ ಪರಮಾತ್ಮನನ್ನು ಮನುಷ್ಯನು ಅರಿಯಲಾರನೋ ಅಲ್ಲಿಯವರೆಗೆ ಅರ್ಚಾ (ವಿಗ್ರಹ) ಇತ್ಯಾದಿಗಳಲ್ಲಿ ಪೂಜೆಯನ್ನು ಮಾಡಬೇಕು ಎಂದಿಲ್ಲಿ ಹೇಳಿದೆ.

### ಜೀವಿಯ ಗತಿ

ಏಳನೆಯ ಅಧ್ಯಾಯದಲ್ಲಿ ಮನುಷ್ಯನು ಏಕೆ ಪಾಪ ಗಳನ್ನು ಮಾಡುತ್ತಾನೆ ಎಂದು ವಿಚಾರ ಮಾಡಲಾಗಿದೆ. ದುಃಖ, ರೋಗ, ಮುಪ್ಪು ಮುಂತಾದವುಗಳಿಂದ ಉಂಟಾ ಗುವ ಹಿಂಸೆಯನ್ನೂ ವರ್ಣಿಸಲಾಗಿದೆ. ಯಮದೂತರು ಜೀವನನ್ನು ಕೊಂಡೊಯ್ಯುವ ಪರಿಯನ್ನೂ ಇಲ್ಲಿ ಹೇಳಿದೆ.

ಹಾಗೆಯೇ ಜೀವನು ತಾಯಿಯ ಗರ್ಭದಲ್ಲಿ ಹೇಗೆ ಬೆಳೆಯುವನೆಂಬುದನ್ನು ಇಲ್ಲಿ ವಿವರಿಸಲಾಗಿದೆ. ಗರ್ಭಸ್ಥ ನಾದ ಜೀವನು ಭಗವಂತನ ಸ್ತುತಿಯನ್ನು ಮಾಡುತ್ತಾನೆ. ಆದರೆ ಹುಟ್ಟಿದ ಮೇಲೆ ಎಲ್ಲವೂ ವಿಸ್ಮೃತಿಗೆ ಒಳಗಾಗುತ್ತದೆ. ಆಧ್ಯಾತ್ಮ ಮಾರ್ಗದಲ್ಲಿ ಸಾಗುವ ಗಂಡಸಿಗೆ ಹೆಣ್ಣು ಹೇಗೆ ಮಾಯೆಯೋ, ಹಾಗೆ ಆಧ್ಯಾತ್ಮಿಕ ಉನ್ನತಿಯನ್ನು ಅಪೇಕ್ಷಿಸುವ ಹೆಣ್ಣಿಗೆ ಗಂಡು ಕೂಡ ಮಾಯೆ ಎಂದು ಕೂಡ ಪ್ರತಿಪಾದಿಸಲಾಗಿದೆ.